# ಆಯ್ದುಕೊಂಡ ಅಧ್ಯಾಯಗಳು

**(2019–20ನೇ ವರ್ಷದ ಜೂನ್ ಮತ್ತು ಸೆಪ್ಟಂಬರ್ ನ ವಾರ್ಷಿಕ ಪರೀಕ್ಷೆಗಳು, ರಾಜ್ಯ ಪೂರ್ವ ಸಿದ್ಧತಾ ಪರೀಕ್ಷೆ ಹಾಗೂ ಮಂಡಳಿಯ 4 ಮಾದರಿ ಪ್ರಶ್ನೆಪತ್ರಿಕೆಗಳ ವಿಶ್ಲೇಷಣೆ ಆಧರಿಸಿ ಈ ಕೆಳಕಂಡ ಪಾಠಗಳನ್ನು ಆಯ್ದುಕೊಂಡಿದೆ)**

| ಕ್ರ.ಸಂ | ಅಧ್ಯಾಯಗಳು | ಪ್ರಶ್ನೆಗಳ ವಿಧ | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | 1 ಅಂಕ ಮತ್ತು 2 ಅಂಕ | 1ಅಂಕದ 18, 2ಅಂಕದ 11 |
| 2 | ಸ್ವಾತಂತ್ರ್ಯೋತ್ತರ ಭಾರತ | 1 ಅಂಕ ಮತ್ತು 2 ಅಂಕ | 1ಅಂಕದ 19, 2ಅಂಕದ 8 |
| 3 | ಸಾಮಾಜಿಕ ಚಳುವಳಿಗಳು | 1 ಅಂಕ ಮತ್ತು 2 ಅಂಕ | 1ಅಂಕದ 11, 2ಅಂಕದ 10 |
| 4 | ಭಾರತದ ಪ್ರಾಕೃತಿಕ ಲಕ್ಷಣಗಳು | 1 ಅಂಕ ಮತ್ತು 2 ಅಂಕ | 1ಅಂಕದ 14, 2ಅಂಕದ 12 |
| 5 | ಭಾರತದ ವಾಯುಗುಣ | 1 ಅಂಕ ಮತ್ತು 2 ಅಂಕ | 1ಅಂಕದ 11, 2ಅಂಕದ 9 |
| 6 | ಅಭಿವೃದ್ಧಿ | 1 ಅಂಕ ಮತ್ತು 2 ಅಂಕ | 1ಅಂಕದ 7, 2ಅಂಕದ 4 |
| 7 | ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ | 1 ಅಂಕ ಮತ್ತು 2 ಅಂಕ | 1ಅಂಕದ 8, 2ಅಂಕದ 7 |
| 8 | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು | 3 ಅಂಕ | 10 |
| 9 | ಸಾಮಾಜಿಕ ಸ್ತರ ವಿನ್ಯಾಸ | 3 ಅಂಕ | 5 |
| 10 | ದುಡಿಮೆ | 3 ಅಂಕ | 3 |
| 11 | ಭಾರತದ ಕೈಗಾರಿಕೆಗಳು | 3 ಅಂಕ | 2 |
| 12 | ಗ್ರಾಮೀಣಾಭಿವೃದ್ಧಿ | 3 ಅಂಕ | 6 |
| 13 | ಬ್ಯಾಂಕ್ ವ್ಯವಹಾರಗಳು | 3 ಅಂಕ | 4 |
| 14 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | 4 ಅಂಕ | 6 |
| 15 | ಸ್ವಾತಂತ್ರ್ಯ ಹೋರಾಟ | 4 ಅಂಕ | 5 |
| 16 | ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ | 4 ಅಂಕ | 10 |
| 17 | ಭಾರತದ ಸಮಸ್ಯೆಗಳು ಮತ್ತು ಪರಿಹಾರಗಳು | 4 ಅಂಕ | 9 |
| | ಭೂಗೋಳದ 1, 2, 6, 9, 10 ನೇ ಅಧ್ಯಾಯ | ನಕಾಶೆ | 12 |
| | | | |

## 1 ಅಂಕದ ಪ್ರಶ್ನೆಗಳು

### ಭಾರತಕ್ಕೆ ಯುರೋಪಿಯನ್ನರ ಆಗಮನ

1 ಭಾರತಕ್ಕೆ ಯಾರು, ಯಾವಾಗ ಜಲಮಾರ್ಗ ಕಂಡುಹಿಡಿದರು?

**ಉ: ವಾಸ್ಕೋಡಿಗಾಮ 1498 ರಲ್ಲಿ**

2. ವಾಸ್ಕೋಡಗಾಮ ಭಾರತದ ಯಾವ ಸ್ಥಳಕ್ಕೆ ಬಂದು ತಲುಪಿದ?

**ಉ: ಕಾಪ್ಪಡ್**

3. 1453 ರಲ್ಲಿ ಅಟೋಮನ್ ಟರ್ಕರು ಯಾವ ನಗರ ವಶಪಡಿಸಿಕೊಂಡರು?

**ಉ: ಕಾನ್ ಸ್ಟಾಂಟಿನೋಪಲ್.**

4.ಬಾರತದಲ್ಲಿ ಪೋರ್ಚುಗೀಸರ ಮೊಟ್ಟಮೊದಲ ವೈಸ್ ರಾಯ್

**ಉ: ಪ್ರಾನ್ಸಿಸ್ಕೋ ಡಿ ಆಲ್ಮೇಡಾ.**

5. ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕರು ಯಾರು?

**ಉ: ಆಲ್ಫಾನ್ಸೋ ಡಿ ಅಲ್ಬುಕರ್ಕ್**

6. "ನೀಲಿ ನೀರಿನ ನೀತಿ" ಎಂದರೇನು?

**ಉ: ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿ ಬಲಪಡಿಸುವುದು.**

7. "ನೀಲಿ ನೀರಿನ ನೀತಿ" ಯಾರು ಜಾರಿಗೆ ತಂದರು?

**ಉ: ಫ್ರಾನ್ಸಿಸ್ಕೋ ಡಿ ಆಲ್ಮೇಡಾ ಜಾರಿಗೆ ತಂದನು.**

8. 1510 ರಲ್ಲಿ ಅಲ್ಬುಕರ್ಕ್ ಯಾರಿಂದ ಗೋವಾ ವಶಪಡಿಸಿಕೊಂಡನು?

**ಉ: ಬಿಜಾಪುರದ ಸುಲ್ತಾನನಿಂದ.**

9. ಡಚ್ಚರು ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದ ವರ್ಷ ಯಾವುದು?.

**ಉ: 1602**

10. ಇಂಗ್ಲೆಂಡ್ ರಾಣಿ 'ಇಂಗ್ಲೀಷ್ ಈಷ್ಟ್ ಇಂಡಿಯಾ ಕಂಪನಿ' ಗೆ ಪೂರ್ವ ದೇಶಗಳ ವ್ಯಾಪಾರ ನಡೆಸಲು ಅನಿಮತಿ ನೀಡಿದ ವರ್ಷ.

**ಉ: 1600**

11. ಸೂರತ್ ನಲ್ಲಿ ಈಷ್ಟ್ ಇಂಡಿಯಾ ಕಂಪನಿಗೆ ಮೊದಲ ವ್ಯಾಪಾರ ಕೋಠಿ ತೆರೆಯಲು ಅನುಮತಿ ನೀಡಿದ ದೊರೆ ಯಾರು?

**ಉ: ಮೊಗಲ್ ದೊರೆ ಜಹಾಂಗೀರ್.**

12.1617ರಲ್ಲಿ ಜಹಾಂಗೀರ್ ಆಸ್ಥಾನಕ್ಕೆ ಬಂದ ಬ್ರಿಟೀಷ್ ರಾಯಭಾರಿ

**ಉ: ಸರ್ ಥಾಮಸ್ ರೋ.**

13. ಇಂಗ್ಲೀಷರು 'ಸೆಂಟ್ ಜಾರ್ಜ್ ಫೋರ್ಟ್' ಹೇಗೆ ಕಟ್ಟಿದರು?

**ಉ: ಚಂದ್ರಗಿರಿ ರಾಜನಿಂದ ಮದ್ರಾಸ್ ನಲ್ಲಿ ಭೂಮಿ ಪಡೆದು.**

14. ಬ್ರಿಟಿಷರು ಬಾಂಬೆ ಹೇಗೆ ಪಡೆದರು?

**ಉ: ಇಂಗ್ಲೆಂಡ್ ರಾಜಕುಮಾರನಿಂದ ಬಾಡಿಗೆ ಪಡೆದರು(1668)**

15. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ.

**ಉ: 1664.**

16. ಭಾರತದಲ್ಲಿ ಫ್ರೆಂಚರ ರಾಜಧಾನಿ.

**ಉ: ಪಾಂಡಿಚೆರಿ (ಪುದುಚೆರಿ).**

17. ಬಕ್ಸಾರ್ ಕದನ ನಡೆದ ವರ್ಷ.

**ಉ: 1765**

18. 1765 ರಲ್ಲಿ ಬಂಗಾಳದಲ್ಲಿ ದ್ವಿಪ್ರಭುತ್ವ ಸ್ಥಾಪಿಸಿದವರು?

**ಉ: ರಾಬರ್ಟ್ ಕ್ಲೈವ್.**

### ಸ್ವಾತಂತ್ರ್ಯೋತ್ತರ ಭಾರತ

19. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಒಟ್ಟು ದೇಶಿ ಸಂಸ್ಥಾನಗಳ ಸಂಖ್ಯೆ ಎಷ್ಟು?

**ಉ– 562**

20. "ಸಂಪತ್ತಿನ ಸೋರಿಕೆ ಸಿದ್ಧಾಂತ" ಪ್ರತಿಪಾದಿಸಿದವರು ಯಾರು?

**ಉ– ದಾದಾಬಾಯಿ ನವರೋಜಿ.**

21. ಬಾಂಗ್ಲಾ ವಿಮೋಚನೆಯಾದ ವರ್ಷ ಯಾವುದು?

**ಉ– 1971**

22. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಇದ್ದ ಗವರ್ನರ್ ಜನರಲ್/ ಕಂಪನಿಯ ಕೊನೆಯ ಗವರ್ನರ್ ಜನರಲ್ ಯಾರು?

**ಉ– ಮೌಂಟ್ ಬ್ಯಾಟನ್**

23. ಭಾರತದ ಸಂವಿಧಾನ ಜಾರಿಗೆ ಬಂದ ವರ್ಷ ಯಾವುದು?

**ಉ– 1950 ಜನೆವರಿ 26**

24. ಭಾರತದ ಪ್ರಥಮ ಗೃಹಮಂತ್ರಿ/"ಭಾರತದ ಉಕ್ಕಿನ ಮನುಷ್ಯ".

**ಉ– ಸರ್ಧಾರ್ ವಲ್ಲಭಭಾಯಿ ಪಟೇಲ**

25. ಹೈದರಾಬಾದ ನಿಜಾಮನ 'ಕ್ರೂರ ಪಡೆ'ಯ ಹೆಸರೇನು?

**ಉ–ರಜಾಕಾರರು**

26. ಹೈದರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾದ ವರ್ಷ.

**ಉ– 1948**

27. ಜುನಾಗಡ್ ಸಂಸ್ಥಾನ ಭಾರತದಲ್ಲಿ ವಿಲೀನವಾದ ವರ್ಷ.

**ಉ– 1949**

28. ಬಾಂಗ್ಲಾದಿಂದ ಬಂದ ನಿರಾಶ್ರಿತರು ಬಂಗಾಳದಲ್ಲಿ ನೆಲೆಯೂರಲು ಕಾರಣವೇನು?

**ಉ– ಬಂಗಾಳಿ ಭಾಷೆ.**

ನ್ಯಾಯಾಲಕ್ಕೆ ದೂರು ಸಲ್ಲಿಸಬೇಕು?

**ಉ– ರಾಷ್ಟ್ರೀಯ ಆಯೋಗ.**

95. ಜಿಲ್ಲಾ ಗ್ರಾಹಕ ಸಂರಕ್ಷಣಾ ಮಂಡಳಿಗೆ ಯಾರು ಅಧ್ಯಕ್ಷರಾಗಿರುತ್ತಾರೆ?

**ಉ– ಜಿಲ್ಲಾಧಿಕಾರಿಗಳು.**

96. 20 ಲಕ್ಷಗಳವರೆಗಿನ ದೂರು ಸ್ವೀಕರಿಸುವ ಗ್ರಾಹಕ ನ್ಯಾಯಾಲಯ ಯಾವುದು?

**ಉ– ಜಿಲ್ಲಾ ವೇದಿಕೆ.**

## *ಎರಡು ಅಂಕದ ಪ್ರಶ್ನೆಗಳು*

### ಭಾರತಕ್ಕೆ ಯುರೋಪಿಯನ್ನರ ಆಗಮನ

**1. ಮದ್ಯ ಕಾಲದಲ್ಲಿ ಭಾರತ ಯುರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?**

- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಕೊಳ್ಳುತ್ತಿದ್ದರು.
- ಅವರಿಂದ ಇಟಲಿ ವರ್ತಕರು ಕೊಂಡು ಯುರೋಪ್ ನಲ್ಲಿ ಮಾರುತ್ತಿದ್ದರು.

**2. ಬಾರತದ ಯಾವ ವಸ್ತುಗಳಿಗೆ ಯುರೋಪ್ ನಲ್ಲಿ ಬೇಡಿಕೆ ಇತ್ತು?**

- ಸಾಂಭಾರ ಪದಾರ್ಥಗಳಾದ ಮೆಣಸು, ಜೀರಿಗೆ,
- ದಾಲ್ಚಿನ್ನಿ, ಎಲಕ್ಕಿ, ಶುಂಠಿ.

**3. ಯುರೋಪಿಯನ್ನರು ಬಾರತಕ್ಕೆ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳು ಯಾವುವು?**

- 1453 ರಲ್ಲಿ ಕಾನ್ ಸ್ಟಾಂಟಿನೋಪಲ್ ಪತನ.
- ಇಟಲಿ ವರ್ತಕರ ಏಕಸ್ವಾಮ್ಯ ಮುರಿಯುವುದು.
- ದಿಕ್ಸೂಚಿ, ಅಸ್ಟ್ರೋಲೋಬ್, ಸಿಡಿಮದ್ದುಗಳ ಆವಿಷ್ಕಾರ.

**4. ಸಮುದ್ರಯಾನಕ್ಕೆ ವೈಜ್ಞಾನಿಕ ಆವಿಷ್ಕಾರಗಳು ಕಾರಣ. ಸಮರ್ಥಿಸಿ. / ಜಲಮಾರ್ಗ ಶೋಧಕ್ಕೆ ಕಾರಣವಾದ ವೈಜ್ಞಾನಿಕ ಆವಿಷ್ಕಾರಗಳಾವುವು?**

- ದಿಕ್ಸೂಚಿ, ಸಿಡಿಮದ್ದು, ಅಸ್ಟ್ರೋಲೋಬ್ ಗಳ ಆವಿಷ್ಕಾರ.
- ನೌಕಾಯಾನಕ್ಕೆ ಅಗತ್ಯವಾದ ನಕಾಶೆಗಳ ಉಪಯೋಗ.

**5. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯುರೋಪಿಯನ್ನರನ್ನು ಪಟ್ಟಿ ಮಾಡಿ.**

- ಪೋರ್ಚುಗೀಸರು. * ಇಂಗ್ಲೀಷರು.
- ಡಚ್ಚರು. * ಫ್ರೆಂಚರು.

**6. ಭಾರತದಲ್ಲಿ ಡಚ್ಚರ ವ್ಯಾಪಾರ ಕೋಠಿಗಳಾವುವು?**

- ಸೂರತ್. * ಕ್ಯಾಂಬೆ.
- ಕೊಚ್ಚಿನ್. * ಮಚಲೀಪಟ್ಟಣ.

**7. ಭಾರತದಲ್ಲಿ ಫ್ರೆಂಚರ ವ್ಯಾಪಾರ ಮಳಿಗೆಗಳಾವುವು?**

- ಸೂರತ್. * ಮಚಲೀಪಟ್ಟಣ.
- ಚಂದ್ರನಗರ. * ಮಾಹೆ. * ಕಾರೈಕಲ್.

**8. ಬಕ್ಸಾರ್ ಕದನಕ್ಕೆ ಕಾರಣಗಳನ್ನು ಬರೆಯಿರಿ.**

- ನವಾಬ ಮೀರ್ ಖಾಸಿಂ ಸ್ವತಂತ್ರನೆಂದು ಭಾವಿಸಿದ್ದು.
- ಬಂಗಾಳದ ವ್ಯಾಪಾರ ಸುಂಕಮುಕ್ತ ಎಂದು ಘೋಷಿಸಿದ್ದು.
- ಬ್ರಿಟಿಷರು ಮೀರ್ ಜಾಫರ್ ನನ್ನು ಕೆಳಗಿಳಿಸಿ ಮೀರ್ ಖಾಸಿಂ ನನ್ನು ನವಾಬನನ್ನಾಗಿ ಮಾಡಿದ್ದು.

**9. ಬಕ್ಸಾರ್ ಕದನದ ಘಟನೆಗಳನ್ನು ಬರೆಯಿರಿ.**

- ಮೀರ್ ಜಾಫರ್, ಮೊಘಲ್ ದೊರೆ ಮತ್ತು ಔದ್ ನ ನವಾಬ ಒಪ್ಪಂದ ಮಾಡಿಕೊಂಡರು.
- 1764 ರಲ್ಲಿ ಬಕ್ಸಾರ್ ಎಂಬಲ್ಲಿ ಯುದ್ಧ.
- ಮೀರ್ ಖಾಸಿಂ ಸೋತು ಪಲಾಯನ.
- ಷಾ ಆಲಂ ಶರಣಾದ.

**10. ಬಕ್ಸಾರ್ ಕದನದ ಪರಿಣಾಮಗಳೇನು?**

- ಕಂಪನಿಗೆ ಬಂಗಾಳದ ದಿವಾನಿ ಹಕ್ಕು.
- ಷೂಜ ಉದ್ದೌಲ ಕಂಪನಿಗೆ 50 ಲಕ್ಷ ಪರಿಹಾರ ನೀಡಿದ.
- ಬಂಗಾಳದ ಪೂರ್ಣ ಆಡಳಿತ ಕಂಪನಿಗೆ.

**11. ರಾಬರ್ಟ್ ಕ್ಲೈವ್ ಬಂಗಾಳದಲ್ಲಿ ಜಾರಿಗೆ ತಂದ ದ್ವಿಪ್ರಭುತ್ವ ಪದ್ಧತಿ ವಿವರಿಸಿ.**

- ಬ್ರಿಟಿಷರಿಗೆ ಭೂ ಕಂದಾಯ ವಸೂಲಿ ಹಕ್ಕು.
- ನವಾಬನು ಆಡಳಿತ ಕಾರ್ಯ ನಡೆಸುವುದು.

### ಸ್ವಾತಂತ್ರ್ಯೋತ್ತರ ಭಾರತ

**12. ಭಾರತವು ಸ್ವಾತಂತ್ರ್ಯ ನಂತರ ಎದುರಿಸಿದ ಸಮಸ್ಯೆಗಳಾವವು?**

- ಮತೀಯ ಗಲಭೆಗಳು,
- ನಿರಾಶ್ರಿತರ ಸಮಸ್ಯೆಗಳು,
- ಹೊಸ ಸರ್ಕಾರ ರಚನೆ

**13. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?**

- ಪ.ಬಂಗಾಳ, ಅಸ್ಸಾಂಗಳಲ್ಲಿ ನಿರಾಶ್ರಿತರಿಗೆ ನೆಲೆ.
- ಬಾಂಗ್ಲಾ ನಿರಾಶ್ರಿತರಿಗೆ ಬಂಗಾಳದಲ್ಲಿ ನೆಲೆ.
- ಟಿಬೆಟಿಯನ್ನರಿಗೆ ಬೈಲುಕುಪ್ಪೆಯಲ್ಲಿ 3000ಎಕರೆ ಜಮೀನು

**14. ಬ್ರಟಿಷರು ಭಾರತ ಬಿಟ್ಟು ಹೋಗುವಾಗ ಭಾರತದ ಸಂಸ್ಥಾನಗಳಿಗೆ ನೀಡಿದ 3 ಅವಕಾಶಗಳೇನು?**

- ಭಾರತ ಸೇರಬಹುದು.

- ಉದ್ಯೋಗ ಖಾತ್ರಿ ಯೋಜನೆಗಳ ಮೂಲಕ ಉದ್ಯೋಗ.
- ವಸತಿ ಯೋಜನೆಗಳ ಮೂಲಕ ವಸತಿಗಳು.

**29. ಪಂಚಾಯತ್ ರಾಜ್ ಸಂಸ್ಥೆಗಳ ಲಕ್ಷಣಗಳನ್ನು ಬರೆಯಿರಿ**

- ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯ್ತಿಗಳು.
- ನೇರ ಹಾಗು ನಿಯಮಿತ ಚುನಾವಣೆಗಳು.
- ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗ, ಮಹಿಳೆಯರಿಗೆ ಮೀಸಲಾತಿ.
- ಮುಂಗಡ ಪತ್ರದ ಮೂಲಕ ಹಣಕಾಸು ನಿರ್ವಹಣೆ.
- ಕಾರ್ಯ ನಿರ್ವಾಹಕ ಮತ್ತು ಇತರ ಸಿಬ್ಬಂದಿ.

**30. ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ವಿವರಿಸಿ.**

- ತಾಯಿಯಾಗಿ, ಹೆಂಡತಿಯಾಗಿ, ಸೊಸೆಯಾಗಿ, ಮಗಳಾಗಿ ವಿವಿಧ ಪಾತ್ರಗಳ ನಿರ್ವಹಣೆ.
- ಕೃಷಿ ಕಾರ್ಮಿಕಳಾಗಿ ಮತ್ತು ನೌಕರಳಾಗಿ ದುಡಿಮೆ.
- ಪುಷ್ಪ ಕೃಷಿ, ಕೋಳಿ ಸಾಕಾಣಿಕೆಯಲ್ಲಿ ಮಹಿಳೆಯರು ಹೆಚ್ಚು.
- ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿಯಿಂದ ರಾಜಕೀಯದಲ್ಲೂ ಭಾಗ.
- ಮಹಿಳಾ ಸಂಘಗಳ ಮೂಲಕ ಆರ್ಥಿಕ ಸ್ವಾವಲಂಬನೆ.

## ಬ್ಯಾಂಕ್ ವ್ಯವಹಾರ

**31. ಬ್ಯಾಂಕ್ ನ ಗುಣಲಕ್ಷಣಗಳನ್ನು ಬರೆಯಿರಿ.**

- ಹಣದ ವಹಿವಾಟು
- ವ್ಯಕ್ತಿ/ಸಂಸ್ಥೆ/ಕಂಪನಿ
- ಠೇವಣಿಗಳನ್ನು ಅಂಗೀಕರಿಸುತ್ತವೆ
- ಸಾಲಗಳನ್ನು ಕೊಡುವುದು
- ಪಾವತಿ ಮತ್ತು ಹಿಂದಕ್ಕೆ ಪಡೆಯುವುದು
- ಏಜೆಂಟ್ ಸೇವೆಗಳು

**32. ಬ್ಯಾಂಕ್ ನ ಕಾರ್ಯಗಳು/ ಸೇವೆಗಳನ್ನು ಬರೆಯಿರಿ.**

- ಠೇವಣಿಗಳನ್ನು ಅಂಗೀಕರಿಸುವುದು.
- ಸಾಲಗಳನ್ನು ಕೊಡುವುದು.
- ಹಣವನ್ನು ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
- ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
- ಹುಂಡಿಗಳನ್ನು ಸೋಡಿ ಮಾಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
- ಎ.ಟಿ.ಎಮ್. ಸೇವೆ

**33. ಬ್ಯಾಂಕು ಖಾತೆಯನ್ನು ತೆರೆಯುವ ವಿಧಾನ ಬರೆಯಿರಿ.**

1. ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು
2. ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು
3. ಪ್ರಸ್ತಾವನೆ ಅರ್ಜಿ ನಮೂನೆ ತುಂಬುವುದು
4. ಪರಿಚಿತರ ಉಲ್ಲೇಖನವನ್ನು ಕೊಡುವುದು
5. ಬ್ಯಾಂಕು ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು
6. ಅಧಿಕಾರಿಯ ಒಪ್ಪಿಗೆ
7. ಪ್ರಾರಂಭಿಕ ಠೇವಣಿ

**34. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗೆ ವ್ಯತ್ಯಾಸ ಬರೆಯಿರಿ**

| **1.ಉಳಿತಾಯ ಖಾತೆ.** (Savings account) | **1.ಚಾಲ್ತಿ ಖಾತೆ.** (Savings account) |
|---|---|
| 1.ವೇತನ ಪಡೆಯುವವರು, ನಿಯಮಿತ ಆದಾಯದವರು ಪ್ರಾರಂಭಿಸುವ ಖಾತೆ. ಉದಾ:ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು<br>2.ಜನರು ಹಣ ಉಳಿತಾಯ ಮಾಡಲು ಸಹಾಯ.<br>3.ಗರಿಷ್ಠ ಮೊತ್ತಕ್ಕೆ ಮಿತಿ ಇಲ್ಲ | 1.ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ, ಔದ್ಯೋಗಿಕ ಸಂಸ್ಥೆಯವರು ತೆರೆಯುವ ಖಾತೆ.<br>2.ಹಣದ ವಹಿವಾಟಿಗೆ ಮಿತಿ ಇಲ್ಲ.<br>3.ಈ ಖಾತೆಗೆ ಬಡ್ಡಿ ಇಲ್ಲ. |

**35. ಆವರ್ತ ಠೇವಣಿ ಖಾತೆ ಮತ್ತು ನಿಶ್ಚಿತ ಠೇವಣಿ ಖಾತೆಗೆ ವ್ಯತ್ಯಾಸ ಬರೆಯಿರಿ.**

| **3. ಆವರ್ತ ಠೇವಣೆ ಖಾತೆ.** **(Reccuring Deposit** account) | **4. ನಿಶ್ಚಿತ ಠೇವಣೆ ಖಾತೆ** **(Fixed Deposit** account) |
|---|---|
| 1 ಭವಿಷ್ಯ ಕಾಲದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುತ್ತದೆ.<br>2. ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಜಮಾ ಮಾಡುತ್ತಾರೆ.<br>3.ಅವಧಿ ಮುಗಿದ ನಂತರ | 1 ಈ ಖಾತೆಯಲ್ಲಿ ಠೇವಣಿಯನ್ನು ಒಂದು ನಿಗಧಿತ ಅವಧಿಗೆ ಒಂದೇ ಬಾರಿಗೆ ಇಡಲಾಗುತ್ತದೆ.<br>2.ಠೇವಣಿ ಹಣವನ್ನು ನಿಶ್ಚಿತ ಅವಧಿ ಮುಗಿದ ನಂತರ ಠೇವಣಿದಾರರಿಗೆ ಪಾವತಿ.<br>3.ಬಡ್ಡಿದರ ಅವಧಿಗನುಗುಣವಾಗಿ |

